ನಾಯಿಗಳಿಗೆ ಕನಿಷ್ಠ ವಾರಕ್ಕೆ ಒಮ್ಮೆಯಾದರೂ ಸ್ನಾನ ಮಾಡಿಸಬೇಕು. ಕೂದಲು ಹೆಚ್ಚಾಗಿದ್ದಲ್ಲಿ, ನಿತ್ಯ ಅದನ್ನು ಬಾಚುವ ಕೆಲಸ ಮಾಡಲೇಬೇಕು. ಇಲ್ಲವಾದಲ್ಲಿ ಆರೋಗ್ಯ ಸಮಸ್ಯೆಗಳು ಕಾಡಬಹುದು. ಸ್ನಾನ ಮಾಡಿಸುವ ಮುನ್ನ ಮೈಗೆ ಕೊಬ್ಬರಿ ಎಣ್ಣೆ ಹಚ್ಚಿ, ನಂತರ ಸ್ನಾನ ಮಾಡಿಸಿದರೆ ಚರ್ಮ ಹಾಗೂ ಕೂದಲು ಆರೋಗ್ಯಕರವಾಗಿರುತ್ತದೆ. ನಾಯಿಗೆ ಸರಿಯಾದ ಸಮಯಕ್ಕೆ ಸ್ನಾನ ಮಾಡಿಸದೇ ಹೋದರೆ ಉಣ್ಣೆ, ಚಿಗಟದಂತಹ ಕೀಟಗಳು ನಾಯಿಗಳ ಕೂದಲಿನಲ್ಲಿ ಸೇರಿ ಸಮಸ್ಯೆಯಾಗುತ್ತದೆ.

ನಾಯಿಗಳಿಗೂ ಜಂತು ಸೇರಿದಂತೆ ಹುಳುಗಳ ಕಾಟ ಇರುತ್ತದೆ. ಹೀಗಾಗಿ ಡಿ–ವರ್ಮ್ ಮಾಡುವುದು ಅತ್ಯಗತ್ಯ. ಮರಿ ಇದ್ದಾಗ ಯಾವ ಔಷಧ ಕೊಟ್ಟು ಡಿ–ವರ್ಮ್ ಮಾಡಬೇಕೆಂದು ವೈದ್ಯರು ತಿಳಿಸುತ್ತಾರೆ. ಅದನ್ನೇ ವಯಸ್ಸಿಗೆ ಅನುಗುಣವಾಗಿ ವೈದ್ಯರ ಸಲಹೆ ಪಡೆದು ಡಿ–ವರ್ಮ್ ಮಾಡಿದರೆ ನಾಯಿಯ ಹೊಟ್ಟೆ ಹಾಗೂ ಆರೋಗ್ಯ ಹಾಳಾಗುವುದಿಲ್ಲ.

ನಾಯಿಗಳಿಗೆ ಜ್ವರ ಬಂದಾಗ, ವಾಂತಿಯಾದಾಗ, ಬೇಧಿಯಾದಾಗ ಕೂಡಲೇ ಸರಿಯಾದ ಆರೈಕೆ ಮಾಡಬೇಕು. ವಾಂತಿ ಮಾಡಿದ ಕೂಡಲೇ ಅವುಗಳಿಗೆ ಮನ ಬಂದಂತೆ ನೀರು ಕುಡಿಯಲು ಅಥವಾ ಆಹಾರ ಸೇವಿಸಲು ಕೊಡಬಾರದು. ಗಂಟಲು ಒದ್ದೆಯಾಗುವಷ್ಟು ನೀರನ್ನು ಮಾತ್ರ ಆಗಾಗ ಕೊಡಬೇಕು. ಹೀಗೆ 2 ಗಂಟೆ ನಂತರ ಅವುಗಳಿಗೆ ಕಡಿಮೆ ಪ್ರಮಾಣದಲ್ಲಿ ಏನಾದರೂ ದ್ರವ ರೂಪದ ಆಹಾರ ನೀಡಬಹುದು. ಅಜೀರ್ಣ, ಗ್ಯಾಸ್ಟ್ರಿಕ್ ಸೇರಿದಂತೆ ಬೇರೆ ಬೇರೆ ಕಾರಣಗಳಿಂದ ವಾಂತಿ ಆಗಬಹುದು. ಹಾಗಾದಲ್ಲಿ ವೆಟರ್ನರಿ ವೈದ್ಯರ ಬಳಿ ತಕ್ಷಣ ತೋರಿಸಿ.

## ತರಬೇತಿ ಅಗತ್ಯ

ನಾಯಿಗಳಿಗೆ ತರಬೇತಿ ನೀಡಲು ಬಹಳ ಸಮಯ ತೆಗೆದುಕೊಳ್ಳುತ್ತದೆ. ಅಂದರೆ ಒಂದು ನಾಯಿಯನ್ನು ಮನೆಯ ಮಗುವಂತೆ ಸಿದ್ಧಗೊಳಿಸಬೇಕಾಗುತ್ತದೆ. ಹಾಗಾಗಿ ನಾಯಿಗೆ ತರಬೇತಿಯ ಅಗತ್ಯವಿರುತ್ತದೆ. ಇದಕ್ಕೆ ಸಂಬಂಧಿಸಿದಂತೆ ಅಂತರ್ಜಾಲದಲ್ಲಿ ಸಾಕಷ್ಟು ಟ್ಯುಟೋರಿಯಲ್‌ಗಳ ಮಾಹಿತಿ ದೊರೆಯುತ್ತದೆ. ಇವು ನಮ್ಮ ನಾಯಿಗಳಿಗೆ ತುಂಬಾ ಉತ್ತಮವಾಗಿ ತರಬೇತಿ ನೀಡುತ್ತವೆ.

ಬೇರೆ ತಳಿಯ ನಾಯಿಗಳನ್ನು ತಂದು ಸಾಕುವ ಬದಲು ಸ್ಥಳೀಯ ಬ್ರೀಡ್‌ಗಳನ್ನು ಸಾಕಿದರೆ ಖರ್ಚು ಕಡಿಮೆ ಹಾಗೂ ಅವುಗಳು ಆರೋಗ್ಯಕರವಾಗಿ ತುಂಬಾ ಸಮಯ ಬದುಕುತ್ತವೆ.

ಇಷ್ಟೆಲ್ಲ ಮಾಡಲು ಸಮಯ, ಜವಾಬ್ದಾರಿ ತೆಗೆದುಕೊಳ್ಳುವ ಮನಸ್ಸು, ಆರ್ಥಿಕ ಸ್ಥಿತಿ ಹಾಗೂ ಸಮಯ ಇದ್ದರೆ ಮಾತ್ರ ನಾಯಿಯನ್ನು ಮನೆಗೆ ತನ್ನಿ. ಇಲ್ಲವಾದಲ್ಲಿ ಹಣ ಕೊಟ್ಟು ತಂದ ನಾಯಿಯನ್ನು ನೋಡಿಕೊಳ್ಳಲಾಗದೆ ಅನಾಥ ಮಾಡುವವರ ಸಾಲಿಗೆ ನೀವೂ ಸೇರುವಿರಿ.



ಬೋರ್ಡಿಂಗ್‌ನಲ್ಲಿರುವ ನಾಯಿ



ನೋಡ್ಕೊಳಿ' ಅಂತ ಸ್ನೇಹಿತರನ್ನು ಕೇಳುವುದಕ್ಕೆ ಸಂಕೋಚ. ಕರೆದುಕೊಂಡು ಹೋಗುವುದೂ ಅಸಾಧ್ಯ. ನನ್ನ ಹಾಗೆ ಅನೇಕರು ನಾಯಿ ಸಾಕುತ್ತಿದ್ದು, ಎಲ್ಲರಿಗೂ ಮನೆ ಬಿಟ್ಟು ಹೋಗುವಾಗ ಈ ಸಮಸ್ಯೆ ಕಾಡುತ್ತಿತ್ತು. ಹೀಗಾಗಿ ನಾನೇ ಮನೆಯ ಟೆರೇಸ್ ಮೇಲೆ ನಾಯಿಗಳ ಬೋರ್ಡಿಂಗ್ ಶುರು ಮಾಡಿದೆ' – ಇದು ಚಿತ್ರದುರ್ಗದಲ್ಲಿ ನಾಯಿಗಳ ಹಾಸ್ಟೆಲ್ ಆರಂಭಿಸಿ ಹತ್ತಾರು ಕುಟುಂಬಗಳಿಗೆ ನಾಯಿ ಸಾಕಲು ಅನುವು ಮಾಡಿಕೊಟ್ಟ ವಿದ್ಯಾಸಾಗರ್ ಅವರು ಹೇಳಿದ ನಾಯಿ ಕಥೆ.

'ಸಾಕು ನಾಯಿಗಳನ್ನು ಇಲ್ಲಿ ಪ್ರೀತಿಯಿಂದ ನೋಡಿಕೊಳ್ಳುತ್ತೇವೆ. ಊಟ, ವಸತಿ, ಆರೋಗ್ಯ ಎಲ್ಲದರ ಕಡೆಗೂ ನಿಗಾ ಇಟ್ಟುಕೊಳ್ಳುತ್ತೇವೆ, ಹೀಗಾಗಿ ತುರ್ತು ಕೆಲಸದ ನಿಮಿತ್ತ ಊರಿಗೆ ಹೋಗುವವರು, ಆರೋಗ್ಯ ಸಮಸ್ಯೆ ಉಂಟಾಗಿ ನಾಯಿ ನೋಡಿಕೊಳ್ಳಲು ಅಸಾಧ್ಯವಾದವರು ಈ ಬೋರ್ಡಿಂಗ್ ಪ್ರಯೋಜನ ಪಡೆಯುತ್ತಿದ್ದಾರೆ. ನಮ್ಮ ಮನೆಯ ಟೆರೇಸ್ ಮೇಲೆ 25 ನಾಯಿ ಗೂಡುಗಳನ್ನು ನಿರ್ಮಿಸಿ ಅಗತ್ಯ ಸೌಲಭ್ಯ ಒದಗಿಸಿದ್ದೇವೆ. ನಾಯಿಗಳಿಗೆ ಕಾಲ ಕಾಲಕ್ಕೆ ಊಟ, ನೀರು ಕೊಡುತ್ತಿದ್ದು, ಮಲಗಲು ಸೂಕ್ತ ವ್ಯವಸ್ಥೆ ಮಾಡಿದ್ದೇವೆ. ಸಾಮಾನ್ಯವಾಗಿ ಮೊಸರನ್ನ, ಚಿಕನ್ ಸೂಪ್, ಪೆಡಿಗ್ರಿ ಕೊಡುತ್ತೇವೆ. ನಾಯಿ ಮಾಲೀಕರು ಯಾವ ಆಹಾರ ಕೊಡುವಂತೆ ಸೂಚನೆ ನೀಡುತ್ತಾರೋ ಅದರಂತೆ ಆಹಾರ ನೀಡುತ್ತೇವೆ. ನಾಯಿಗಳು ಜಗಳವಾಡದಂತೆ ಪ್ರತ್ಯೇಕ ಬೋನುಗಳಲ್ಲೇ ಮಲಗುವ ವ್ಯವಸ್ಥೆ ಮಾಡಿದ್ದೇವೆ' ಎನ್ನುತ್ತಾರೆ ವಿದ್ಯಾಸಾಗರ್.

ಪ್ರತಿ ನಾಯಿಯ ಕಾಳಜಿಗೆ ದಿನವೊಂದಕ್ಕೆ 400 ರೂಪಾಯಿ ದರವನ್ನು ವಿದ್ಯಾಸಾಗರ್ ನಿಗದಿ ಮಾಡಿದ್ದಾರೆ. ಅದರಲ್ಲಿ ಊಟದ ಖರ್ಚೂ ಸೇರಿದೆ. 'ನಾಯಿಗಳನ್ನು ನಿತ್ಯವೂ ವಾಕಿಂಗ್ ಕರೆದುಕೊಂಡು ಹೋಗುತ್ತೇವೆ. ಸಂಜೆ ಆಟವಾಡಲು ಬಿಡುತ್ತೇವೆ. ನಾಯಿಯ ಆರೋಗ್ಯ ಕೆಟ್ಟರೆ ಔಷಧಿ ಒದಗಿಸಿ ಜಾಗರೂಕತೆಯಿಂದ ನೋಡಿಕೊಳ್ಳುತ್ತೇವೆ. ಹೀಗಾಗಿ ನಾಯಿ ಸಾಕುವವರು ನೆಮ್ಮದಿಯಿಂದ ಇರಲು ಸಾಧ್ಯವಾಗಿದೆ' ಎನ್ನುತ್ತಾರೆ.

**ವಿದ್ಯಾಸಾಗರ್ ಸಂಪರ್ಕ: 8970380244**

ಮೈಸೂರಿನಲ್ಲಿ ನಾಯಿಗಳ ಬೋರ್ಡಿಂಗ್ ನಡೆಸುತ್ತಿರುವ ಪ್ರಮೋದ್